**C.C.275/2020 P.W.1**

ದಿನಾಂಕಃ **18.03.2021** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಆರೋಪಿಯ  ಪರ ಮಾನ್ಯ ಶ್ರೀ **HMB** ವಕೀಲರಿಂದಃ

ನನ್ನ ಹೆಸರು ಮಹೇಶ್. ನಾನು ವ್ಯವಸಾಯ ಮಾಡುತ್ತೇನೆ. ದೂರಿಗೆ ಮತ್ತು ನೋಟೀಸ್ ಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಪ್ರಮಾಣಪತ್ರಕ್ಕೂ ಸಹ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ನನಗೆ 4 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಅಡಿಕೆ, ಕಾಳುಮೆಣಸು, ಬಾಳೆ ಮತ್ತು ತೆಂಗು ಬೆಳೆದಿರುತ್ತೇನೆ. ಆರೋಪಿಗೆ ಕವಿರಾಜ್ ಮತ್ತು ಸಂತೋಷ ಎಂಬ ಎರಡು ಹೆಸರು ಇರುತ್ತದೆ.

ಆರೋಪಿ ಶಿವಮೊಗ್ಗದ ನನಗೆ ಮೆಗ್ಗಾನ್ ಆಸ್ಪತ್ರೆಯಲ್ಲಿ ಪರಿಚಯ ಆಗಿರುತ್ತಾರೆ. ಆರೋಪಿಯು factory ಅಲ್ಲಿ ಕೆಲಸ ಮಾಡುವುದಾಗಿ ಹೇಳಿರುತ್ತಾರೆ. ಆರೋಪಿ ಹರಿಹರದವರು.

ನಿಪಿ.5 ರಲ್ಲಿ ಆರೋಪಿಯ ಯಾವ ವಿಳಾಸವನ್ನು ನಮೂದು ಮಾಡಿರುತ್ತೇನೆ ಎಂದು ಈಗ ಹೇಳಲು ಆಗುವುದಿಲ್ಲ. ಆದಕಾರಣ ಆರೋಪಿ ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ, ನಾನು ಅವರ ಮನೆಯನ್ನು ನೋಡಿರುತ್ತೇನೆ. ಆರೋಪಿಯ ಮನೆ ದಾವಣಗೆರೆ ಹೋಗುವ ರಸ್ತೆಯಲ್ಲಿ ಸೇತುವೆ ದಾಟಿದ ನಂತರ ಒಂದು ದೇವಸ್ಥಾನದ ಹಿಂದೆ ಬರುತ್ತದೆ. ಸದರಿ ಊರಿನ ಹೆಸರು ನನಗೆ ಈಗ ನೆನಪಿಲ್ಲ. ಆರೋಪಿ ನನ್ನ ಸಂಬಂಧಿಕರಲ್ಲ, ಪರಿಚಯಸ್ಥರು.

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ನಾನು ನನ್ನ ಹೆಂಡತಿಯನ್ನು ಕರೆದುಕೊಂಡು ಹೋಗಿದ್ದೇನು. ಮೆಗ್ಗಾನ್ ಆಸ್ಪತ್ರೆಯ ವೈದ್ಯರ ಹೆಸರು ನನಗೆ ನೆನಪಿಲ್ಲ. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಆರೋಪಿ ಮೊದಲ ಬಾರಿ ನಮ್ಮ ಮನೆಗೆ ಮೇ1-2 ನೇ ತಾರೀಕಿನಂದು ಬಂದಿರುತ್ತಾರೆ. ಆರೋಪಿ ಒಬ್ಬರೇ ಬಂದಿರುತ್ತಾರೆ. ಆರೋಪಿ ನನ್ನ ಜೊತೆ ದೂರವಾಣಿಯಲ್ಲಿ ಮಾತನಾಡುತ್ತಿದ್ದರು, ಅವರು ಮೊದಲು ಬಾರಿ ಮನೆಗೆ ಬಂದಾಗ ಹಣವನ್ನು ಕೇಳಿರುತ್ತಾರೆ. ಸದರಿ ಸಮಯದಲ್ಲಿ ಆರೋಪಿ ಬಳಸುತ್ತಿದ್ದ ಮೊಬೈಲ್ ನಂಬರ ನನ್ನ ಬಳಿ ಇರುತ್ತದೆ, ನನ್ನ ಮೊಬೈಲ್ ನೋಡಿ ಹೇಳಬೇಕು.

ಹಣಕಾಸಿನ ವಿಚಾರಕ್ಕೆ ಸಂಬಂಧಪಟ್ಟಂತೆ ಕೊಪ್ಪ ನ್ಯಾಯಾಲಯದಲ್ಲಿ ಪ್ರಕರಣವನ್ನು

50 ಸಾವಿರ ರೂಪಾಯಿಗಳಿಗೆ ನಾನು ಹೂಡಿದ್ದೇನು. ನನ್ನ ವಿರುದ್ಧ ಬೇರೆ ಹಣಕಾಸಿನ ಪ್ರಕರಣಗಳು ಇರುವುದಿಲ್ಲ.

ನಮ್ಮ ಮನೆಯಲ್ಲಿ 4 ಜನ ವಾಸವಾಗಿರುತ್ತಾರೆ. ನಾನು, ನನ್ನ ಹೆಂಡತಿ ಮತ್ತು ಇಬ್ಬರು ಹೆಣ್ಣು ಮಕ್ಕಳು. ಒಬ್ಬ ಮಗಳ ಹೆಸರು ರಕ್ಷಿತಾ ಎಂದರೆ ಸರಿ. ಇನ್ನೊಬ್ಬ ಮಗಳ ಹೆಸರು ರಮ್ಯಾ ಆಗಿರುತ್ತದೆ. ಸದರಿಯವರು ಅವಿವಾಹಿತರು ಎಂದರೆ ಸರಿ.

ಆರೋಪಿ ಪತ್ರಕರ್ತರು ಎನ್ನುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಅವರು ಒಂದು ಕಂಪನಿಯಲ್ಲಿ ಇರುತ್ತೇನೆ ಎಂದು ಹೇಳಿರುತ್ತಾರೆ. ಸಾಮಾನ್ಯವಾಗಿ ಪತ್ರಿಕೋದ್ಯಮದಲ್ಲಿ ವರದಿಯನ್ನು ಮಾಡುವವರು ಬೇರೆ ಬೇರೆ ಊರುಗಳಿಗೆ ಗುಪ್ತ ವಿಚಾರ ವರದಿ ಮಾಡಲು ಬರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪತ್ರಿಕೋದ್ಯಮದ ಗುಪ್ತ ವಿಚಾರವನ್ನು ವರದಿ ಮಾಡಲು ನಮ್ಮ ಮನೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನ್ಯಾಯಾಲಯದ ಮುಂದೆ ಹೊರತಂದರೆ ನನಗೆ ಏನು ತೊಂದರೆ ಇಲ್ಲ.

ನನಗೆ ರೈಸ್ ಪುಲ್ಲಿಂಗ್ ವ್ಯವಹಾರದ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಗುಪ್ತ ಮಾಹಿತಿ ಕಲೆ ಹಾಕಲು ಆರೋಪಿ ನಮ್ಮ ಮನೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಅಪರಿಚಿತ ವ್ಯಕ್ತಿಗಳ ಜೊತೆ ಸಲೀಸಾಗಿ ಹಣಕಾಸಿನ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿಯಲ್ಲ, ಆರೋಪಿ ನನ್ನ ಜೊತೆ ಮೊಬೈಲ್ ನಲ್ಲಿ ಸಂಪರ್ಕ ಇದ್ದರು, ಅವರು ಪರಿಚಯಸ್ಥರಾದ ಕಾರಣ ಹಣವನ್ನು ನೀಡಿರುತ್ತೇನೆ. ಕೇವಲ ಒಂದು ಬಾರಿ ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಆರೋಪಿಯ ಮುಖ ಪರಿಚಯ ಮಾಡಿಕೊಂಡಿದ್ದು, ಆದಕಾರಣ ಸಂಪರ್ಕದಲ್ಲಿದ್ದ ವ್ಯಕ್ತಿ ಆರೋಪಿಯೇ ಅಥವಾ ಇಲ್ಲವೋ ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಹಣಕಾಸು ವ್ಯವಹಾರದಲ್ಲಿ ಎಷ್ಟೇ ಮೊತ್ತವಾದರು ಒಂದು ಚೆಕ್ ಸಾಕು ಎಂದರೆ ಸರಿ. ಆರೋಪಿ 2 ಚೆಕ್ ಬರದುಕೊಟ್ಟ ಕಾರಣ ನಾನು ನ್ಯಾಯಾಲಯದ ಮುಂದೆ 2 ಚೆಕ್ ಅನ್ನು ಹಾಜರುಪಡಿಸಿರುತ್ತೇನೆ. ಸದರಿ ಎರಡು ಚೆಕ್ ಗಳನ್ನು ಆರೋಪಿ ನನ್ನ ಎದುರು ಬರೆದು ಕೊಟ್ಟಿರುತ್ತಾರೆ. ಒಂದೇ ದಿನ ಎರಡು ಚೆಕ್ ಅನ್ನು ನೀಡಿರುತ್ತಾರೆ. ನಾನು ನನ್ನ ಮನೆಯಲ್ಲಿ ರೈಸ್ ಪುಲ್ಲಿಂಗ್ ವ್ಯವಹಾರ ಮಾಡುತ್ತಿದ್ದು ಸದರಿ ವ್ಯವಹಾದ ಬಗ್ಗೆ ಗುಪ್ತವಾಗಿ ಮಾಹಿತಿಯನ್ನು ಪಡೆಯಲು ಬಂದಾಗ ಅವರು ಸದರಿ ರೈಸ್ ಪುಲ್ಲಿಂಗ್ ವ್ಯವಹಾರದಲ್ಲಿ interested ಎಂದು ನನಗೆ ತೋರಿಸಲು ಸದರಿ ಚೆಕ್ ಅನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಗುಪ್ತ ಮಾಹಿತಿ ಪಡೆಯುವ ಕಾರಣದಿಂದ ಆರೋಪಿ ನನಗೆ 80 ಸಾವಿರಗಳನ್ನು

ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರದಲ್ಲಿ ಆರೋಪಿ ಪರ್ತ್ರಕರ್ತರು ಎಂದು ತಿಳಿದ ನಂತರ ನಾನು ಅವರ ಬಳಿ ಕ್ಷಮೇ ಕೋರಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಣ್ಣು ಮಕ್ಕಳಿಗೆ ಮದುವೆಯಾಗದ ಕಾರಣ ಅವರ ಭವಿಷ್ಯಕ್ಕೆ ತೊಂದರೆ ಆಗುತ್ತದೆ ಎಂಬ ಕಾರಣದಿಂದ ಅವರು ಪತ್ರಿಕೆಯಲ್ಲಿ ವರದಿ ಮಾಡದೇ ಅವರು ನೀಡಿದ 80 ಸಾವಿರಗಳನ್ನು ನನ್ನಿಂದ ವಾಪಸ್ಸು ಪಡೆದುಕೊಂಡು ಹೋಗಿರುತ್ತಾರೆ, ಆದರೆ ಚೆಕ್ ಗಳನ್ನು ಮರೆತು ಹೋಗಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಯ ಮೇಲಿನ ದ್ವೇಷದಿಂದ ಸದರಿ ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡು ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ರೈಸ್ ಪುಲ್ಲಿಂಗ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನ ವಿರುದ್ಧ ಸಾಕ್ಷ್ಯಧಾರಗಳಿಂದ ಅಪರಾಧ ಸಾಬೀತಾದರೆ ನನ್ನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದು ಎಂದರೆ ಸದರಿ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅವ್ಯವಹಾರದಲ್ಲಿ ತೊಡಗಿದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಕರಣದಲ್ಲಿ ನನ್ನ ಹೆಣ್ಣು ಮಕ್ಕಳು ಸಹ ಭಾಗಿಯಾಗಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಶ ಕೋರಿದ್ದು, ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ
ನ ರಾ ಪುರ.